ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 19 ಜಿಪಸ 2014 (10)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 18.06.2014

**ಅಧಿಸೂಚನೆ**

ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಮೀಸಲಾತಿ) ನಿಯಮಗಳು, 2005 ಮತ್ತು (ತಿದ್ದುಪಡಿ) ನಿಯಮಗಳು, 2010 ರಲ್ಲಿ ನಿಗಧಿಪಡಿಸಿದಂತೆ ಹಾಗೂ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣ 138(2)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಜನವರಿ/ಫೆಬ್ರವರಿ 2011ರಲ್ಲಿ ರಚಿತವಾಗಿರುವ ತಾಲ್ಲೂಕು ಪಂಚಾಯತಿಗಳ ಮೂರನೇ ಅವಧಿಗೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳಿಗೆ ಮೀಸಲಾತಿಯನ್ನು ನಿಗಧಿಗೊಳಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 19 ಜಿಪಸ- 2014, ದಿನಾಂಕ: 16.04.2014ರಂದು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿತ್ತು.

ಸಾರ್ವಜನಿಕರಿಂದ ಸ್ವೀಕೃತವಾದ ಮನವಿಗಳನ್ನು ಸರ್ಕಾರ ಪರಿಶೀಲಿಸಿದೆ ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು, ಮೀಸಲಾತಿಗೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಂಖ್ಯೆ: 5873/2011 ಹಾಗೂ ಇತರೆ ರಿಟ್ ಅರ್ಜಿಗಳಲ್ಲಿ ದಿನಾಂಕ: 14.02.2011ರಂದು ನೀಡಿರುವ ನಿರ್ದೇಶನಗಳನ್ವಯ, ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಹುದ್ದೆಗಳ ಮೀಸಲಾತಿಯನ್ನು 11ನೇ ಆವರ್ತಕದಿಂದ ಹೊಸದಾಗಿ ಪ್ರಾರಂಭಿಸಿದ್ದು, ಇದರ ಆಧಾರದ ಮೇಲೆ 12ನೇ ಆವರ್ತಕದ (ಪ್ರಸ್ತುತ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಮೂರನೇ ಅವಧಿಯ) ಮೀಸಲಾತಿಯನ್ನು ಅನುಸೂಚಿತ ಪಂಗಡ/ಅನುಸೂಚಿತ ಜಾತಿ/ ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಹಾಗೂ ಅದರೊಂದಿಗೆ ಮೀಸಲಿರಿಸದವರಿಗೆ ಹಂಚಿಕೆಯಾದ ಹುದ್ದೆಗಳ ವಿವರಗಳನ್ನು **"ಚಿಕ್ಕಮಗಳೂರು ಜಿಲ್ಲಾ ಪಂಚಾಯತಿ ವ್ಯಾಪ್ತಿಯ ತಾಲ್ಲೂಕು ಪಂಚಾಯತಿಗಳಿಗೆ"** ಕೆಳಕಂಡಂತೆ ನಿರ್ಧಿಷ್ಟಪಡಿಸಲಾಗಿದೆ.

| ಕ್ರಸಂ | ಜಿಲ್ಲೆಯ ಹೆಸರು | ತಾಲ್ಲೂಕು ಪಂಚಾಯಿತಿ ಹೆಸರು | ಅಧ್ಯಕ್ಷ | ಉಪಾಧ್ಯಕ್ಷ |
|---|---|---|---|---|
| 10 | **ಚಿಕ್ಕಮಗಳೂರು** | | | |
| | a) | ಚಿಕ್ಕಮಗಳೂರು | ಅನುಸೂಚಿತ ಜಾತಿ (ಮ) | ಸಾಮಾನ್ಯ |
| | b) | ಕಡೂರು | ಸಾಮಾನ್ಯ | ಸಾಮಾನ್ಯ (ಮ) |
| | c) | ತರೀಕೆರೆ | ಅನುಸೂಚಿತ ಜಾತಿ | ಹಿಂದುಳಿದ ವರ್ಗ–ಅ |
| | d) | ಕೊಪ್ಪ | ಸಾಮಾನ್ಯ (ಮ) | ಹಿಂದುಳಿದ ವರ್ಗ –ಅ (ಮ) |
| | e) | ನರಸಿಂಹರಾಜಪುರ | ಅನುಸೂಚಿತ ಪಂಗಡ (ಮ) | ಹಿಂದುಳಿದ ವರ್ಗ–ಬ (ಮ) |
| | f) | ಮೂಡಿಗೆರೆ | ಸಾಮಾನ್ಯ | ಹಿಂದುಳಿದ ವರ್ಗ–ಅ(ಮ) |
| | g) | ಶೃಂಗೇರಿ | ಅನುಸೂಚಿತ ಪಂಗಡ | ಹಿಂದುಳಿದ ವರ್ಗ–ಬ (ಮ) |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಎಂ.ಜುಲ್ಫಿಕಾರ್ ಉಲ್ಲಾ)
ನಿರ್ದೇಶಕರು (ಪಂ.ರಾಜ್-2) ಮತ್ತು
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತು ಪಂ.ರಾಜ್ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು– ಈ ಅಧಿಸೂಚನೆಯನ್ನು ಇಂದೇ ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಕೊಠಡಿ ಸಂ.330, 3ನೇ ಮಹಡಿ ಕಟ್ಟಡ, ಬೆಂಗಳೂರು, ಇವರಿಗೆ ಒದಗಿಸುವಂತೆ ಕೋರಿದೆ.

ಪ್ರತಿ:

1. ಪ್ರಾದೇಶಿಕ ಆಯುಕ್ತರು, ಬೆಳಗಾವಿ, ಬೆಂಗಳೂರು ಮತ್ತು ಗುಲ್ಬರ್ಗಾ ವಿಭಾಗಗಳು.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಎಲ್ಲಾ ಜಿಲ್ಲೆಗಳ ಉಪ ವಿಭಾಗಾಧಿಕಾರಿಗಳು.
4. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
5. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
6. ಮಾನ್ಯ ಗ್ರಾ.ಅ&ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ.ಅ&ಪಂ.ರಾಜ್ ಇಲಾಖೆ.
8. ವೆಬ್‌ಸೈಟ್/ಕರ್ನಾಟಕ ವಿಕಾಸ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.